**1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಂ.ಎ.ಸಿ.ಟಿ. ನ್ಯಾಯಾಲಯ, ಮದ್ದೂರು.**

**OS 96/2018**

| | |
|---|---|
| **ಸಾಕ್ಷಿದಾರರ ಹೆಸರು** | **ಜಿ ಶೇಖರ್** |
| **ತಂದೆಯ ಹೆಸರು** | **ಗೋವಿಂದೇಗೌಡ** |
| **ವಯಸ್ಸು** | **43 ವರ್ಷ** |
| **ಉದ್ಯೋಗ** | **ತಾಲ್ಲೂಕು ಭೂ ಮಾಪಕರು, ಮದ್ದೂರು ತಾಲ್ಲೂಕು** |
| **ವಾಸ ಸ್ಥಳ** | **ಮೈಸೂರು** |

**ಸಾಕ್ಷಿಯನ್ನು ದಿನಾಂಕಃ 04.08.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ನ್ಯಾಯಾಲಯದಿಂದ**

1. ನಾನು 2023 ರಿಂದ ತಾಲ್ಲೂಕು ಭೂ ಮಾಪಕರಾಗಿ ಕೆಲಸ ಮಾಡುತ್ತಿದ್ದೇನೆ. ಈ ದಾವೆಯಲ್ಲಿ ನನಗೆ ನ್ಯಾಯಾಲಯದಿಂದ commissioner warrant ಬಂದಿದ್ದು ಆ ಪ್ರಕಾರ ನಾನು ಅಳತೆ ಮಾಡಿ ನಕ್ಷೆ ತಯಾರಿಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸಿದ್ದೇನೆ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನಕ್ಷೆ ಮತ್ತು ವರದಿಯನ್ನು ಈ ನಾನು ನೋಡುತ್ತಿದ್ದೇನೆ. ಅದನ್ನು ನಿಸಿ–1 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃಪ್ರತಿವಾದಿಯರ ಪರ ಶ್ರೀ ಹೆಚ್ ವಿ ಬಿ ವಕೀಲರಿಂದ**

2. ನಾನು ದಾವಾ ಸ್ವತ್ತನ್ನು ಅಳತೆ ಮಾಡಲು ಸ್ಥಳಕ್ಕೆ ಹೋಗಿದ್ದಾಗ ವಿಲೇಜ್ ಮ್ಯಾಪ್ ಮತ್ತು ಅಳೆಯ ಸರ್ವೆ ನಂಬರ್ 17 ರ ಮೂಲ ಟಿಪ್ಪಣಿ ತೆಗೆದುಕೊಂಡು ಹೋಗಿದ್ದೆ. ಆ ಬಗ್ಗೆ ವರದಿಯಲ್ಲಿ ಹೇಳಿದ್ದೇನೆ. ನಾನು ಸ್ಥಳಕ್ಕೆ ಹೋದಾಗ ಅಲ್ಲಿ ಕಚ್ಚಾ ನಕಾಶೆಯನ್ನು ಮಾಡಿಕೊಳ್ಳುತ್ತೇನೆ ಎಂದರೆ ಸರಿ. ಅದಕ್ಕೆ ಸ್ಥಳದಲ್ಲಿ ಇದ್ದ ಪಕ್ಷಗಾರರ ಸಹಿಗಳನ್ನು ತೆಗೆದುಕೊಳ್ಳುತ್ತೇನೆ ಎಂದರೆ ಮಹಜರ್ ತೆಗೆದುಕೊಳ್ಳುತ್ತೇನೆ. ನಾನು ಸ್ಥಳದಲ್ಲಿ ತಯಾರಿಸಿದ ನಕಾಶೆಯ ಆಧಾರದ ಮೇಲೆ ಕಛೇರಿಯಲ್ಲಿ ಹೊಸದಾಗಿ ನಕ್ಷೆಯನ್ನು ತಯಾರಿಸುತ್ತೇನೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ತಯಾರಿಸಿದ್ದ ಕಚ್ಚಾ ನಕಾಶೆಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಸಾಕ್ಷಿಯು ಮುಂದುವರಿದು ಅದು ತನ್ನ reference ಗೆ ಎಂದು ನುಡಿದಿರುತ್ತಾರೆ. ಕಚ್ಚಾ ನಕ್ಷೆಯ ಬಗ್ಗೆ ವರದಿಯಲ್ಲಿ ಹೇಳಿಲ್ಲ. ನಾನು ಅಳತೆಯನ್ನು ಸ್ಥಳದಲ್ಲಿ ಮಸೀದಿ ಕಡೆಯಿಂದ ಪ್ರಾರಂಭ ಮಾಡಿದ್ದೆ. ಸ್ಥಳದಿಂದ ಮಸೀದಿ ಉತ್ತರ ದಿಕ್ಕಿಗೆ ಇರುತ್ತದೆ. ದಾವಾ ಸ್ಥಳದ ಪೂರ್ವಕ್ಕೆ ಮಸೀದಿ

ಇರುತ್ತದೆ ಎಂದರೆ ಪೂರ್ವ ಮತ್ತು ಉತ್ತರ ಎರಡು ದಿಕ್ಕಿನಲ್ಲಿಯೂ ಮಸೀದಿ ಇದೆ. ದಾವಾ ಸ್ವತ್ತಿನ ಉತ್ತರಕ್ಕೆ ಮಸೀದಿ ಇಲ್ಲ ಎಂದರೆ ಸರಿಯಲ್ಲ. ನಾನು ಉತ್ತರ ದಿಕ್ಕಿನಿಂದ ಅಳತೆ ಮಾಡಲು ಪ್ರಾರಂಭಿಸಿದಾಗ ದಾವಾ ಸರ್ವೆ ನಂಬರ್ ನ ಗಡಿಕಲ್ಲು ಇರಲಿಲ್ಲ. ಸಾಕ್ಷಿಯು ಮುಂದುವರಿದು ಬಾಜು ಸರ್ವೆ ನಂಬರ್ ನ ಗಡಿಕಲ್ಲು ಆಧಾರದ ಮೇಲೆ ಅಳತೆ ಮಾಡಿದ್ದಾಗಿ ನುಡಿದಿರುತ್ತಾರೆ. ಆ ರೀತಿ ಬಾಜು ಸರ್ವೆ ನಂಬರ್ ಗಳು ರಿ ಸರ್ವೆ ಯಂತೆ ಸರ್ವೆ ನಂಬರ್ 91, 92 ಮತ್ತು 93 ಆಗಿರುತ್ತವೆ. ಅವುಗಳ ಹಳೆಯ ಸರ್ವೆ ನಂಬರ್ ಗಳನ್ನು ಈಗ ಹೇಳಲು ನನಗೆ ಆಗುವುದಿಲ್ಲ. ಬಾಜು ಸರ್ವೆ ನಂಬರ್ ನ ಗಡಿಕಲ್ಲು ಗುರುತಿಸಿದ ಬಗ್ಗೆ ನಾನು ವರದಿಯಲ್ಲಿ ಹೇಳಿಲ್ಲ. ದಾವಾ ಸ್ವತ್ತಿನಲ್ಲಿ ಯಾವುದೇ ಗಡಿಕಲ್ಲು ಇಲ್ಲ. ನಾನು ಬಾಜು ಸರ್ವೆ ನಂಬರ್ ನ ಗಡಿ ಕಲ್ಲುಗಳನ್ನು ಗುರುತಿಸಿಕೊಂಡಿದ್ದೆ ಎಂಬುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತು ರಿ ಸರ್ವೆ ಆಗಿ ಗ್ರಾಮ ಠಾಣಾಕ್ಕೆ ಸೇರಿಕೊಂಡಿದೆ. ರಿ ಸರ್ವೆ ನಂಬರ್ ಆದಾಗ ಹೊಸ ಸರ್ವೆ ನಂಬರ್ ಕೊಡುತ್ತಾರೆ ಎಂದರೆ ಅದನ್ನು ಗ್ರಾಮ ಠಾಣಾಕ್ಕೆ ಸೇರಿಸಲಾಗಿದೆ. ಒಂದು ಸರ್ವೆ ನಂಬರ್ ರಿ ಸರ್ವೆ ಆದ ನಂತರ ಅದನ್ನು ಅಳತೆ ಮಾಡಬೇಕಾದರೆ ಇಲಾಖೆಯಿಂದ ಅನುಮತಿ ಪಡೆಯಬೇಕು ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಅಳತೆಯನ್ನು ಹಳೆಯ ಸರ್ವೆ ನಂಬರ್ ಪ್ರಕಾರ ಮಾಡಿದ್ದೇನೆ. ಅದನ್ನು ಗ್ರಾಮ ಠಾಣಾ ದಾಖಲೆಯ ಆಧಾರದ ಮೇಲೆ ನಾವು ಅಳತೆ ಮಾಡಲು ಆಗುವುದಿಲ್ಲ, ಪಂಚಾಯಿತಿಯವರು ಮಾಡಬೇಕು. ನಮ್ಮ ಇಲಾಖೆಯಲ್ಲಿ ಪಂಚಾಯಿತಿಯವರುದಾವಾ ಸ್ವತ್ತನ್ನು ಅಳತೆ ಮಾಡಿಸಿರುವ ಬಗ್ಗೆ ದಾಖಲೆಗಳು ಇವೆಯಾ ಎಂದು ನನಗೆ ಮಾಹಿತಿ ಇಲ್ಲ.

3. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ನಕಾಶೆಯಲ್ಲಿ ಅಕ್ಕ ಪಕ್ಕದ ಸರ್ವೆ ನಂಬರ್ ಗಳು ಯಾವುವು ಎಂದು ತೋರಿಸಿಲ್ಲ. ಸಂತೆ ಮೈದಾನದಿಂದ ಉತ್ತರದಲ್ಲಿ ಪೂರ್ವ ಪಶ್ಚಿಮವಾಗಿ ರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆ ಸಂತೆ ಮೈದಾನದ ಜಾಗದಲ್ಲಿ ಬರುತ್ತದೆ ಎಂದರೆ ಸರಿ. ಆ ರಸ್ತೆಯಿಂದ ದಕ್ಷಿಣಕ್ಕೆ ಪಂಚಾಯಿತಿಗೆ ಸೇರಿದ ಅಂಗಡಿಗಳು ಇವೆ ಎಂದರೆ ಸರಿ. ಆ ರಸ್ತೆ ಮತ್ತು ಅಂಗಡಿಗಳನ್ನು ನನ್ನ ನಕಾಶೆಯಲ್ಲಿ ತೋರಿಸಿಲ್ಲ. ದಾವಾ ಸ್ವತ್ತಿನ ಪಶ್ಚಿಮ ದಿಕ್ಕಿನಲ್ಲಿ ತೋರಿಸಿರುವ ರಸ್ತೆ ಮುಂದಕ್ಕೆ ರಾಷ್ಟ್ರೀಯ ಹೆದ್ದಾರಿ 275 ಕ್ಕೆ ಸಂಪರ್ಕ ಕಲ್ಪಿಸುತ್ತದೆ. ಆ ರೀತಿ ಸಂಪರ್ಕ ಕಲ್ಪಿಸಿರುವುದನ್ನು ನಾನು ನಕಾಶೆಯಲ್ಲಿ ತೋರಿಸಿಲ್ಲ ಎಂದರೆ ಅವಶ್ಯಕತೆ ಇಲ್ಲ. ಸಂತೆ ಮೈದಾನದ ಮಧ್ಯದಲ್ಲಿ ಉತ್ತರ ದಕ್ಷಿಣವಾಗಿ ಒಂದು ರಸ್ತೆ ಹೋಗುತ್ತದೆ ಎಂದರೆ ನಾನು ಅದನ್ನು ಪರಶೀಲಿಸಿಲ್ಲ. ಪ್ರತಿವಾದಿಯರು ಸಲ್ಲಿಸಿರುವ Memo of

instructions ಅನ್ನು ನಾನು ಓದಿಕೊಂಡಿದ್ದೇನೆ. ಅದರಲ್ಲಿ ದಾವಾ ಸ್ವತ್ತಿನಲ್ಲಿ ಇರುವ ಎಲ್ಲಾ structure ಗಳನ್ನು ನಕಾಶೆಯಲ್ಲಿ ನೋಟ್ ಮಾಡಬೇಕೆಂದು ಹೇಳಲಾಗಿದೆ ಎಂದರೆ ಸರಿ, ನಾನು ಮಾಡಿದ್ದೇನೆ. ಅದೇ ರೀತಿ ದಾವಾ ಬಿ ಮತ್ತು ಸಿ ಷೆಡ್ಯೂಲ್ ನಲ್ಲಿ ಇರುವ Structure ಗಳನ್ನು ನೋಟ್ ಮಾಡಬೇಕೆಂದು ಹೇಳಲಾಗಿದೆ ಎಂದರೆ, ನಾನು ಮಾಡಿದ್ದೇನೆ. ನಾನು ಸ್ಥಳದಲ್ಲಿ ವಸ್ತುಸ್ಥಿತಿಗೆ ಅನುಗುಣವಾಗಿ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಗಡಿಯನ್ನು ಸರಿಯಾಗಿ ಗುರುತಿಸಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಗಡಿಯನ್ನು ಗುರುತಿಸಿರುವುದರಿಂದ ದಾವಾ ಸ್ವತ್ತನ್ನು ಸರಿಯಾಗಿ ಅಳತೆ ಮಾಡಿಲ್ಲ ಎಂದರೆ ಸರಿಯಲ್ಲ. ಆ ಕಾರಣದಿಂದ ದಾವಾ ಬಿ ಮತ್ತು ಸಿ ಷೆಡ್ಯೂಲ್ ಆಸ್ತಿಗಳು ಎ ಷೆಡ್ಯೂಲ್ ನಲ್ಲಿ ಬರದೇ ಇದ್ದರೂ ಸಹ ಆ ರೀತಿ ಬರುತ್ತದೆ ಎಂದು ತಪ್ಪು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಯರ ಜೊತೆ ಷರೀಕಾಗಿ ಸುಳ್ಳು ವರದಿ ಮತ್ತು ನಕಾಶೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.